ಹೆಚ್ಚುವರಿ  ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

ಪಿ  ಸಿ ಆರ್ ಸಂ.**07/2025**

| | | |
|---|---|---|
| ಸಾಕ್ಷಿದಾರರ ಹೆಸರು | : | ಗುರುರಾಜ್ |
| ತಂದೆಯ ಹೆಸರು | : | ಗಂಗಾಧರ ರೈ |
| ಪ್ರಾಯ | : | 35  ವರ್ಷ |
| ಉದ್ಯೋಗ | | ಚಪ್ಪಲಿ ಅಂಗಡಿ |
| ವಾಸಸ್ಥಳ | : | ಈಶ್ವರಮಂಗಲ |

ದಿನಾಂಕ:**10.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಫಿರ್ಯಾದಿಯ ಸಾಕ್ಷೀಕರಿಸಿದ ಹೇಳಿಕೆ

ಸುಮಾರು 1 ವರ್ಷದ ಹಿಂದೆ ಪುತ್ತೂರು ತಾ. ನೆಟ್ಟಣಿಗೆಮುದ್ನೂರು ಗ್ರಾಮದಲ್ಲಿ 25 ವರೆ ಸೆಂಟ್ ಕನ್ವರ್ಷನ್ ಜಾಗವನ್ನು ಶಶಿ ಎನ್ನುವವರಿಂದ ಖರೀದಿ ಮಾಡಿದ್ದೇನೆ.  ಖರೀದಿ ಮಾಡಿದ  ಜಾಗದಲ್ಲಿ ಮನೆ ಕಟ್ಟುವ ಸಲುವಾಗಿ ನೆಟ್ಟಣಿಗೆಮುದ್ನೂರು ಗ್ರಾಮಪಂಚಾಯಿತಿಯಿಂದ ಲೈಸನ್ಸ್ ಪಡೆದಿದ್ದೇನೆ.  ಮನೆಗೆ ತಡೆಗೋಡೆ ಕಟ್ಟುವ ಸಲುವಾಗಿ ನೆಟ್ಟಣಿಗೆಮುದ್ನೂರು ಗ್ರಾಮಪಂಚಾಯಿತಿಯ ಪಿ ಡಿ ಒ ರವರು ಸ್ಥಳ ಪರಿಶೀಲನೆ ಮಾಡಲು ಬಂದಿದ್ದರು.  ನಂತರ  ತಡೆಗೋಡೆ ನಿರ್ಮಾಣ ಮಾಡಿ ಎಂದು ಅನುಮತಿ ನೀಡಿದ್ದರು. ಅದರಂತೆ ನಾವು ತಡೆಗೋಡೆ ನಿರ್ಮಿಸಲು ಪ್ರಾರಂಬಿಸಿದೆವು.  ಆಗ 1 ರಿಂದ 3 ನೇ ಆರೋಪಿತರು ತಡೆಗೋಡೆ ನಿರ್ಮಾಣ ಮಾಡಲು ಅಡ್ಡಿಪಡಿಸಿದರು.  ನಂತರ ನಾನು ಅವರ ವಿರುದ್ಧ ಸಿವಿಲ್ ದಾವೆಯನ್ನು ಪುತ್ತೂರಿನ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿದೆನು.

2.   ದಿ.9-3-2025 ರಂದು ಕೆಲಸದವರು ತಡೆಗೋಡೆಯ ನಿರ್ಮಾಣ ಮಾಡುವ ಕೆಲಸವನ್ನು ಪ್ರಾರಂಬಿಸಿದ್ದಾಗ ಆರೋಪಿತರು ನಮ್ಮ ಸ್ಥಳಕ್ಕೆ ಬಂದು ಅಕ್ರಮ ಪ್ರವೇಶ ಮಾಡಿ ಅವಾಚ್ಯ ಶಬ್ದಗಳಿಂದ ನನಗೆ ಮತ್ತು ನನ್ನ ತಂದೆ ಗಂಗಾಧರ ರೈರವರಿಗೆ ಬೈದರು.  ನಾವು ಸಿವಿಲ್ ದಾವೆಯನ್ನು ಅವರ ವಿರುದ್ಧ ಸಲ್ಲಿಸಿದ ವಿಚಾರಕ್ಕೆ ನಮ್ಮ ಮೇಲೆ ಅವರಿಗೆ ಸಿಟ್ಟು ಇತ್ತು.  ನಾನು ಅವರಿಗೆ ನಾವು ಕೆಲಸ ಮಾಡಲು ತೊಂದರೆ ಮಾಡಬೇಡಿ , ನಿಮಗೆ ಅನುಮಾನ ಇದ್ದರೆ ಗ್ರಾಮಪಂಚಾಯಿತಿಗೆ ಹೋಗಿ ದಾಖಲೆ ಪರಿಶೀಲಿಸಿ ಅಥವಾ ನ್ಯಾಯಾಲಯಕ್ಕೆ ಹೋಗಿ ದಾವೆ  ಸಲ್ಲಿಸಿ ಎಂದು ವಿನಂತಿ ಮಾಡಿದೆನು. ನಂತರ ನಾನು ನ್ಯಾಯಾಲಯದಲ್ಲಿ ತಡೆಯಾಜ್ಞೆಯಿರುತ್ತದೆ ಎಂದು ಅವರಿಗೆ ತಿಳಿಹೇಳಿದ್ದು ಅದಕ್ಕೆ 3 ನೇ ಆರೋಪಿ ಎಂಥಾ ನ್ಯಾಯಾಲಯ ಮಾರಾಯರೇ ಎಂದು ಹೇಳಿದರು.

ನಂತರ ದಿ.25-04-2025 ರಂದು ಮಧ್ಯಾಹ್ನ 2.30 ರ ಹೊತ್ತಿಗೆ ಕೆಲಸದವರು ತಡೆಗೋಡೆಯ ನಿರ್ಮಾಣದ ಕೆಲಸ ಮಾಡುತ್ತಿದ್ದಾಗ ಆರೋಪಿಗಳು ಕೆಲಸದವರಿಗೆ, ನನ್ನ ತಂದೆಗೆ ಹಾಗೂ ನನಗೆ ಅವಾಚ್ಯ

ಶಬ್ದಗಳಿಂದ ಬೈದರು. ನಾವು ಎಷ್ಟೇ ತಿಳಿ ಹೇಳಿದರೂ ಕೂಡಾ ಅವರು ಬೈಯುವುದನ್ನು ನಿಲ್ಲಿಸಲಿಲ್ಲ, ಪದೇ ಪದೇ ತಡೆಗೋಡೆ ನಿರ್ಮಾಣ ಮಾಡುವುದಕ್ಕೆ ಅಡ್ಡಿಪಡಿಸಿದರು. ನಂತರ ಆರೋಪಿಗಳು ಸೇರಿಕೊಂಡು ಅಲ್ಲೇ ಪಕ್ಕದ ವಾಸಿಯಾದ ವಜ್ರಾಕ್ಷಿ ಎನ್ನುವವರಿಂದ ಖಾಲಿ ಪತ್ರಕ್ಕೆ ಸಹಿ ಮಾಡಿಸಿಕೊಂಡು ನನ್ನ ತಂದೆ ಆಕೆಗೆ ಕಿರುಕುಳ ನೀಡಿದರು ಎಂದು ಸುಳ್ಳು ಸಂಗತಿಗಳನ್ನು ನಮೂದಿಸಿ ಈಶ್ವರಮಂಗಲ ಹೊರ ಪೊಲೀಸ್ ಠಾಣೆಗೆ ದೂರು ಕೊಟ್ಟಿರುತ್ತಾರೆ.

ನಂತರ ಪೊಲೀಸ್ ಠಾಣೆಯಿಂದ ವಜ್ರಾಕ್ಷಿಯವರು ನೀಡಿದ ದೂರಿನ ಸಂಬಂಧಿತವಾಗಿ ಠಾಣೆಗೆ ಬರಲು ಹೇಳಿದ್ದು ಅದನ್ನು ಕೇಳಿ ನನ್ನ ತಂದೆಗೆ ಶಾಕ್ ಆಗಿರುತ್ತದೆ. ನಂತರ ನಾನು ವಜ್ರಾಕ್ಷಿಯವರನ್ನು ಕೇಳಿದಾಗ ಅವರು ನಾನು ಖಾಲಿ ಪತ್ರಕ್ಕೆ ಸಹಿ ಮಾಡಿದ್ದೇನೆ ಎಂದು ಹಾಗೂ ಯಾವುದೇ ಆರೋಪಗಳನ್ನು ನನ್ನ ತಂದೆ ಯ ವಿರುದ್ದ ಮಾಡಿಲ್ಲವೆಂದು ತಿಳಿಸಿರುತ್ತಾರೆ. ನಂತರ ಪೊಲೀಸ್ ಠಾಣೆಗೆ ಹೋಗಿ ಆಕೆಯ ಹೆಸರಿನಲ್ಲಿ ನೀಡಿದ್ದ ದೂರನ್ನು ವಾಪಸ್ಸು ಪಡೆಯುವುದಾಗಿ ತಿಳಿಸಿರುತ್ತಾರೆ.

ನಾನು ಮೊಬೈಲ್ ಹಿಡಿದುಕೊಂಡಿದ್ದಾಗ 2 ನೇ ಆರೋಪಿ ಅಕ್ರಮವಾಗಿ ನಮ್ಮ ಜಾಗದ ಒಳಗೆ ಬಂದು ನೀನು ಫೊಟೋ ತೆಗೆಯುತ್ತೀಯಾ, ಯಾವ ರೀತಿಯ ಪೋಸ್ ಬೇಕು, ನಿನ್ನದು ಏನೂ ನಡೆಯುವುದಿಲ್ಲ ಎಂದು ತಿಳಿಸಿದರು. 1 ನೇ ಆರೋಪಿ ಅಲ್ಲಿಗೆ ಬಂದು ಏರುಧ್ವನಿಯಲ್ಲಿ ಅವ ಬೇವರ್ಸಿ ಅವ ಹೇಗೆ ತಡೆಗೋಡೆ ಕಟ್ಟುತ್ತಾನೆ ನೋಡುವ ಎಂದು ಹೇಳಿದನು. ನಂತರ ದಿ.27-04-2025 ರಂದು ತಡೆಗೋಡೆ ಕಟ್ಟುವಾಗ ಪದೇ ಪದೇ ಆರೋಪಿಗಳು ಅಡ್ಡಿಪಡಿಸಿರುತ್ತಾರೆ.

ದಿ.25-04-2025 ರಂದು ನಮ್ಮ ಜಾಗದಲ್ಲಿ ತಡೆಗೋಡೆ ಕಟ್ಟುವಾಗ 3 ನೇ ಆರೋಪಿ ಅಡ್ಡಿಪಡಿಸಿ ನೀನು 25 ಸೆಂಟ್ ಜಾಗ ಇರುವ ಜನ, ಜುಜುಬಿ ಚಪ್ಪಲಿ ವ್ಯಾಪಾರಿ, ಇಷ್ಟೊಂದು ಕಾರುಬಾರು ಮಾಡಬೇಕಾದರೆ ಇಷ್ಟೊಂದು ಜಮೀನು ಇರುವ ನಾನು ಎಷ್ಟು ಕಾರುಬಾರು ಮಾಡಬೇಕು ಎಂದು ತಿಳಿಸಿದರು. ಗಲಾಟೆ ನಡೆಯುವ ಸಮಯದಲ್ಲಿ ಕೂಸಪ್ಪ ಪೂಜಾರಿ ಮತ್ತು ಕಾರ್ತಿಕ್ ಹಾಗೂ ಕೆಲಸದವರು ಇದ್ದು ಗಲಾಟೆಯನ್ನು ನೋಡಿರುತ್ತಾರೆ. ನಂತರ ನಾನು ಮತ್ತು ನನ್ನ ತಂದೆ ಸಂಪ್ಯ ಪೋ.ಠಾಣೆಗೆ ಹೋಗಿ ಪೋಲೀಸರಿಗೆ ತಡೆಗೋಡೆ ಕಟ್ಟಲು ಪಡೆದ ಪರವಾನಗಿ, ನ್ಯಾಯಾಲಯದಿಂದ ಮಾಡಲಾದ ತಡೆಯಾಜ್ಞೆ ಆದೇಶ, ಫೋಟೋಗಳು ಹಾಗೂ ವಿಡಿಯೋಗಳನ್ನು ಕೊಟ್ಟು ಕಾನೂನು ಕ್ರಮ ತೆಗೆದುಕೊಳ್ಳಲು ಕೋರಿಕೊಂಡೆವು, ಆದರೂ ಕೂಡಾ ಅವರು ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ ಬದಲಾಗಿ ಹಿಂಬರಹವನ್ನು ಕೊಟ್ಟರು. ಆರೋಪಿಗಳ ವಿರುದ್ಧ ಪೊಲೀಸರು ಯಾವುದೇ ಕಾನೂನು ಕ್ರಮ ತೆಗೆದುಕೊಳ್ಳದ ಕಾರಣ ಅವರನ್ನು ಸೂಕ್ತ ಶಿಕ್ಷೆಗೆ ಗುಡಿಪಡಿಸಬೆಕಾಗಿ ಪ್ರಾರ್ಥಿಸುತ್ತೇನೆ.

ನಾನು ಅಸಲು ದಾವಾ ನಂ.30-2025 ರ ಆದೇಶ ಪುಟಗಳ ದೃಡೀಕೃತ ನಕಲು, ದಿ.28-04-2025 ರಂದು ನೀಡಿದ ದೂರಿನ ನಕಲು, ಸ್ವೀಕೃತಿ, ಭಾವಚಿತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-4 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಫಿರ್ಯಾದಿ ತನ್ನ ಮುಂದುವರಿದ ಸಾಕ್ಷೀಕರಿಸಿದ ಹೇಳಿಕೆಗಾಗಿ ಸಮಯಾವಕಾಶ ಕೋರಿದ್ದು ನೀಡಲಾಗಿದೆ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.